ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಖಂಡಿತವಾಗಿ ಗಂಭೀರವಾಗಿ ಪರಿಶೀಲನೆ ಮಾಡಿ ಶಿಕ್ಷಕರಿಗೆ ಕಡಿಮೆ ಸಂಬಳ ಇರುವುದು ಗಮನಕ್ಕೆ ತಂದಿದ್ದಾರೆ, ಅದನ್ನು ಹೆಚ್ಚಿಸುವುದಕ್ಕೂ ಕೂಡ ನಾನು ಪ್ರಯತ್ನ ಮಾಡಿ ಜಾರಿಗೆ ತರುತ್ತೇನೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 18.03.10ರ 8ನೇ ಪಟ್ಟಿಯಿಂದ ಉತ್ತರಿಸುವ 127 ಪ್ರಶ್ನೆಗಳ ಪೈಕಿ 111 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. – ಅನುಬಂಧ – VII

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

i) ವಿಷಯ : ಅಕ್ರಮ ಗಣಿಗಾರಿಕೆ ಬಗ್ಗೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : (ಚಿಕ್ಕೋಡಿ ಸದಲಗಾ) : ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದ ಚಿಕ್ಕೋಡಿ ಸದಲಗ ಶಿರಗಾವಡಿ ಗ್ರಾಮದ ಸರ್ವೇ ನಂ. 72 ಸರ್ಕಾರಿ ಜಮೀನಿನಲ್ಲಿ ಸುಮಾರು 10 ವರ್ಷಗಳಿಂದ ಸಂಜಿವ್ ವಿರೂಪಾಕ್ಷ ಗಿಂಡ್ಯೆರವರು ಸುಮಾರು ನಾಲ್ಕು ಎಕರೆ ಜಮೀನಿನಲ್ಲಿ ಗಣಿಗಾರಿಕೆ ನಡೆಸಿದ್ದು, ಅದರ ಜೊತೆಯಲ್ಲಿ ಅಧಿಕಾರಿಗಳು ಕೂಡ ಶಾಮೀಲಾಗಿದ್ದಾರೆ. ಈ ಸಂಬಂಧ ಗ್ರಾಮಸ್ಥರು ಚಿಕ್ಕೋಡಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿದ್ದರೂ ಕೂಡ ಸದರಿಯವರ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಮೌನವಹಿಸಿದ್ದಾರೆ. ಅಲ್ಲದೆ ಈ ಸಂಬಂಧ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಅಕ್ರಮ ಗಣಿಗಾರಿಕೆ ನಿಲ್ಲಿಸಲು ಕ್ರಮತೆಗೆದುಕೊಳ್ಳದೆ ಇರುವುದನ್ನು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕು ಶಿರಗಾವಡಿ ಗ್ರಾಮದ ಸರ್ವೇ ನಂಬರ್ 72ರ ಸರ್ಕಾರೀ ಗೈರಾಣ ಪ್ರದೇಶದಲ್ಲಿ ಸರ್ಕಾರದಿಂದ ಯಾವುದೇ ಕಲ್ಲು ಗಣಿ ಗುತ್ತಿಗೆಯನ್ನು ಮಂಜೂರು ಮಾಡಿರುವುದಿಲ್ಲ. ಶ್ರೀ ಸಂಜಯ್ ವಿರೂಪಾಕ್ಷ ಗಿಂಡ್ಯೆರವರು ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದು, ಇವರೊಂದಿಗೆ ಗ್ರಾಮ ಲೆಕ್ಕಾಧಿಕಾರಿ ಬಿ.ಬಿ. ಮಾಳಗಿಯವರೂ ಸಹ ಶಾಮೀಲಾಗಿ ಸಹಕರಿಸುತ್ತಿದ್ದಾರೆಂದು ಈ ಕುರಿತು ಸಂಬಂಧಪಟ್ಟ ತಹಶೀಲ್ದಾರ್ ಉಪವಿಭಾಗಾಧಿಕಾರಿ ಚಿಕ್ಕೋಡಿ ಇವರಿಗೆ ಸಾರ್ವಜನಿಕರು ದೂರುಗಳನ್ನು ನೀಡಿದ್ದು, ಯಾವುದೇ ಕ್ರಮ ವಹಿಸಿರುವುದಿಲ್ಲ ಎಂಬ ಅಂಶದ ಮೇರೆಗೆ ದಿನಾಂಕ: 17.03.2010 ರಂದು ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಳಗಾಂವ್ ಹಾಗೂ ಚಿಕ್ಕೋಡಿ ತಾಲ್ಲೂಕಿನ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿರುತ್ತಾರೆ. ಶಿರಗಾವವಾಡಿ ಗ್ರಾಮದ ಸರ್ವೇ ನಂ. 72 ರಲ್ಲಿ ವಡ್ಡರ ಜನಾಂಗಕ್ಕೆ ಸೇರಿದ ಸ್ಥಳೀಯರು ಕಲ್ಲು ಗಣಿಗಾರಿಕೆಯನ್ನು ಈ ಹಿಂದೆ ಸುಮಾರು ವರ್ಷಗಳಿಂದ ಮಾಡುತ್ತಿದ್ದರು ಎಂದು ಸುಮಾರು 15 ದಿವಸಗಳಿಂದ ಕಲ್ಲು ಹೊಡೆಯು ವುದನ್ನು ಸ್ಥಗಿತಗೊಳಿಸಿರುತ್ತಾರೆಂದು ವರದಿ ನೀಡಿರುತ್ತಾರೆ. ಅಲ್ಲದೆ ಸಂಜಯ್ ವಿರೂಪಾಕ್ಷ ಗಿಂಡ್ಯೆರವರು ಟ್ರಾಕ್ಟರ್ ಮಾಲೀಕರಾಗಿದ್ದು, ಕಲ್ಲು ಹೊಡೆಯುತ್ತಿದ್ದ ಭೋವಿ ಜನಾಂಗದವರಿಂದ ಇವರು ಕಲ್ಲನ್ನು ಖರೀದಿಸಿ ಸಾಗಾಣಿಕೆ ಮಾಡುತ್ತಿದ್ದು, ಗಿಂಡ್ಯೆರವರು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ ರೆಂಬುದಾಗಿ ಸ್ಥಳ ಪರಿಶೀಲನಾ ಸಮಯದಲ್ಲಿ ಹಾಜರಿದ್ದ ಸ್ಥಳೀಯರು ತಿಳಿಸಿರುತ್ತಾರೆ. ಪ್ರಸ್ತಾವಿತ ಅಕ್ರಮ ಗಣಿಗಾರಿಕೆಗೆ ಸಹಕರಿಸಿದರು ಎಂದು ಹೇಳಲಾಗಿರುವ ಬಿ.ಬಿ. ಮಾಳಗಿ ಗ್ರಾಮ ಲೆಕ್ಕಿಗರು ಶಿಗ್ಗಾವ್ ಇವರನ್ನು ಚಿಕ್ಕೋಡಿ ತಾಲ್ಲೂಕಿನಿಂದ ಅಥಣಿ ತಾಲ್ಲೂಕಿಗೆ ವರ್ಗಾವಣೆ ಮಾಡಲಾಗಿ ರುತ್ತದೆ. ಪ್ರಸ್ತುತ ಸದರಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ಸ್ಥಗಿತಗೊಂಡಿದ್ದು, ಇಲಾಖೆಯು ತೀವ್ರ ನಿಗಾ ವಹಿಸುತ್ತದೆ. ಅಕ್ರಮ ಗಣಿಗಾರಿಕೆ ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಉತ್ತರಕ್ಕೆ ಮಾತ್ರ ಅವಕಾಶವಿದೆ. ಅವಕಾಶ ಕೊಡುವುದಿಲ್ಲ. ನಾನು ವೆಂಕಟರಾವ್ ನಾಡಗೌಡರಿಗೆ ಕರೆದಿದ್ದೇನೆ. ಶೂನ್ಯ ವೇಳೆಯಲ್ಲಿ ಅವಕಾಶ ಇಲ್ಲ. ತಾವು ಹಿರಿಯ ಸದಸ್ಯರು. ಸತ್ಯಾಂಶವನ್ನು ನೀವು ಬೇರೆ ರೂಪದಲ್ಲಿ ತನ್ನಿ.

ii) ವಿಷಯ : ಭಾಗ್ಯಲಕ್ಷ್ಮಿ ಯೋಜನೆಯ ಬಾಂಡ್‌ಗಳ ನೀಡದೇ ಇರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, 2006–07 ಸಾಲಿನಲ್ಲಿ ಈವರೆಗೂ ಬಾಂಡುಗಳನ್ನು ನೀಡದೇ ಇರುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ವೆಂಕಟರಾವ್ ನಾಡಗೌಡರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರತಕ್ಕಂತಹ ವಿಷಯಕ್ಕೆ ನೀಡಿರತಕ್ಕಂತಹ ಉತ್ತರ ಭಾಗ್ಯಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಆದೇಶ ಸಂಖ್ಯೆ ಮ.ಮ.ಇ 99, ಮ.ಮ.ಆ 2006, ಬೆಂಗಳೂರು ದಿನಾಂಕ: 17.10.06 ರಲ್ಲಿ ಅನುಮತಿ ನೀಡಿರುತ್ತದೆ. 2006–07ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೆ ಬಂದಿರುತ್ತದೆ. ಸದರಿ ಆದೇಶದ ಕಂಡಿಕೆ 2,3 ರ ಅನ್ವಯ ಬಡತನದ ರೇಖೆ ಕೆಳಗಿರುವ ಕುಟುಂಬಗಳಲ್ಲಿ ದಿನಾಂಕ: 31.03.2006ರ ನಂತರ ಜನಿಸಿದ ಹೆಣ್ಣು ಮಕ್ಕಳನ್ನು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನಾಗಿ ದಾಖಲಿಸಿಕೊಳ್ಳಲು ಹೆಸರು ನೋಂದಾಯಿಸಿಕೊಂಡು ಮಂಜೂರಾತಿ ನೀಡಲು ಮಗುವಿನ ಜನನ ಪ್ರಮಾಣ ಪತ್ರ ಒದಗಿಸಿದಲ್ಲಿ ಮಗು ಜನಿಸಿದ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ. ಆದರೆ ಬಿ.ಪಿ.ಎಲ್. ಪಡಿತರ ವಿತರಣೆ ವಿಳಂಬದಿಂದ ಕೆಲವು ಫಲಾನುಭವಿಗಳನ್ನು ನೋಂದಣಿ ಮಾಡುವುದರಲ್ಲಿ ವಿಳಂಬವಾಗಿರುವ ಹಾಗೂ ಅಂಗನವಾಡಿ ಕೇಂದ್ರಗಳು ಇಲ್ಲದಿರುವ ಗ್ರಾಮ ಅಥವಾ ವಾರ್ಡ್‌ಗಳಲ್ಲಿ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸದಿರುವ ಹಿನ್ನೆಲೆಯಲ್ಲಿ 2006–07 ನೇ ಸಾಲಿನಲ್ಲಿ ಜನಿಸಿದ ಬಿ.ಪಿ.ಎಲ್. ಕುಟುಂಬದಲ್ಲಿರುವ ಹೆಣ್ಣು ಮಕ್ಕಳನ್ನು ಯೋಜನೆಯಡಿ ನೋಂದಾಯಿಸಿಕೊಂಡು ಮಂಜೂರಾತಿ ನೀಡಲು ಸರ್ಕಾರದ ಆದೇಶ